**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ರವರ ನ್ಯಾಯಾಲಯ ಶ್ರೀನಿವಾಸಪುರ.**

**ಸಿ ಸಿ ಸಂಖ್ಯೆಃ 292/2019**

ಫಿರ್ಯಾದಿಃ ರಾಜ್ಯಪರ ಶ್ರೀನಿವಾಸಪುರ ಪೊಲೀಸರು.

**ವಿರುದ್ಧ**

ಆರೋಪಿತರುಃ ಶ್ರೀ ಇಸ್ಮಾಯಿಲ್ ಖಾನ್ ಮತ್ತು ಇತರರು

# ದೋಷಾರೋಪಣೆ

ನಾನು ಹೆಚ್. ಆರ್. ದೇವರಾಜು, ಬಿ.ಎ., ಎಲ್.ಎಲ್.ಬಿ. ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ. ದ. ನ್ಯಾ. ದಂಡಾಧಿಕಾರಿಗಳಾದ ನಾನು, ಈ ಮೂಲಕ ಆರೋಪಿಗಳಾದ **ನಿಮ್ಮ ಮೇಲೆ ಅಂದರೆ,**

1. ಇಸ್ಮಾಯಿಲ್ ಖಾನ್ ಬಿನ್ ಲೇಟ್ ಅಬ್ದುಲ್ ಸುಭಾನ್, 52 ವರ್ಷ,
2. ಫೈರೋಜ್ ಖಾನ್ ಬಿನ್ ಇಸ್ಮಾಯಿಲ್, 26 ವರ್ಷ,
3. ಸಾಧಿಕ್ ಬಿನ್ ಶೇಖ್ ಹೈದರ್, 26 ವರ್ಷ,
   ಹೈದರಾಲಿ ಮೊಹಲ್ಲಾ, ಶ್ರೀನಿವಾಸಪುರ ಟೌನ್.
4. ಅತಾವುಲ್ಲ ಬಿನ್ ಲೇಟ್ ಅಬ್ದುಲ್ ರೆಹಮಾನ್, 27 ವರ್ಷ,
   **ಆರೋಪಿ 1, 2 ಮತ್ತು 4 ರವರ ವಾಸಃ**
   ಜಾಕೀರ್ ಹುಸೇನ್ ಮೊಹಲ್ಲಾ,
   ಶ್ರೀನಿವಾಸಪುರ ಟೌನ್.

**ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆಃ-**

ದಿನಾಂಕಃ 22.01.2019 ರಂದು ಬೆಳಿಗ್ಗೆ ಸುಮಾರು 10.00 ಗಂಟೆ ಸಮಯದಲ್ಲಿ ಶ್ರೀನಿವಾಸಪುರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಕೊಳ್ಳೂರು ಗ್ರಾಮದ ಚಾಸಾ 1 ಮತ್ತು 2 ರವರ ಬಾಬ್ತು ಸರ್ವೇ ನಂ.212 ರಲ್ಲಿನ ಜಮೀನಿನಲ್ಲಿ ಹಾಕಿರುವ ಗಿಡಗಳಿಗೆ ಔಷಧಿ ಸಿಂಪಡಿಸಲು ಹೋದಾಗ ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಚಾಸಾ 1 ಮತ್ತು 2 ರವರ ನಿವೇಶನದೊಳಗೆ ಅಕ್ರಮ ಪ್ರವೇಶ ಮಾಡಿ

ಅಪರಾಧಿಕ ಅತಿಕ್ರಮಣ ಮಾಡುವುದರ ಮೂಲಕ ಭಾರತೀಯ ದಂಡ ಸಂಹಿತೆ ಕಲಂ. 447 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

2 ನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸದರಿ ವಿಷಯದಲ್ಲಿ ಚಾಸಾ 1 ಮತ್ತು 2 ರವರ ಮನೆಯ ಬಳಿ ಹೋಗಿ, ಆರೋಪಿಗಳಾದ ನೀವುಗಳು ಮನೆಯ ಒಳಗೆ ಇದ್ದ ಚಾಸಾ 1 ಮತ್ತು 2 ರವರನ್ನು ಅವಾಚ್ಯ ಬೈದು, ಮನೆಯೊಳಗೆ ಏಕಾಏಕಿ ಗೃಹಾತಿಕ್ರಮಣ ಮಾಡುವುದರ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 448 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

3 ನೇಯದಾಗಿ, ಮೇಲ್ಕಂಡ ದಿನಾಂಕ, ವೇಳೆ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸದರಿ ವಿಷಯದಲ್ಲಿ ಚಾಸಾ 1 ಮತ್ತು 2 ರವರ ಹತ್ತಿರ ಜಗಳ ತೆಗೆದು, ಜಮೀನು ನಮಗೆ ಸಂಭಂದಪಟ್ಟಿದ್ದು ಎಂದು ಅವಾಚ್ಯ ಶಬ್ದಗಳಿಂದ ಬೈಯ್ದು ಶಾಂತಿ ಭಂಗ ಉಂಟುಮಾಡಲೆಂಬ ಉದ್ದೇಶದಿಂದ ಅಥವಾ ಇತರ ಯಾವುದೇ ಅಪರಾಧ ಉದ್ದೇಶದಿಂದ ಆತನನ್ನು ಉದ್ದೇಶಪೂರ್ವಕವಾಗಿ ಉದ್ರೇಕಿಸುವುದರ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ. 504 ಸಹವಾಚಕ ಕಲಂ. 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

4 ನೇಯದಾಗಿ, ಮೇಲ್ಕಂಡ ದಿನಾಂಕ, ಸ್ಥಳ ಹಾಗೂ ಸಮಯದಂದು ಆರೋಪಿತರಾದ ನೀವುಗಳು ಸಮಾನ ಉದ್ದೇಶದಿಂದ ಸದರಿ ವಿಷಯದಲ್ಲಿ ಚಾಸಾ 1 ರವರ ಮೇಲೆ ಗಲಾಟೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈದು ಇನ್ನು ಮುಂದೆ ಆ ಜಮೀನಿನೊಳಗೆ ಬಂದರೆ ಒಂದು ಗತಿ ಕಾಣಿಸುತ್ತೇನೆ, ನಿಮ್ಮನ್ನು ಸಾಯಿಸದೆ ಬಿಡುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿ ಅಪರಾಧಿಕ ಭಯೋತ್ಪಾದನೆ ಉಂಟು ಮಾಡುವುದರ ಮೂಲಕ ಭಾ.ದಂ.ಸಂ. ಕಲಂ.506 ಸಹವಾಚಕ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

**ಸದರಿ ಅಪರಾಧಕ್ಕಾಗಿ ಈ ನ್ಯಾಯಾಲಯದ ಅಧಿವಿಚಾರಣೆಗೆ ಒಳಪಡುತ್ತೀರಿ.**

1. ನಿಮ್ಮ ವಿರುದ್ದ ರಚಿಸಿ, ಓದಿ, ಹೇಳಿ ವಿವರಿಸಿದ ದೋಷಾರೋಪಣೆಗಳು ನಿಮಗೆ ಅರ್ಥವಾಯಿತೆ?

2. ನೀವು ತಪ್ಪು ಒಪ್ಪಿಕೊಳ್ಳುತೀರಾ ಅಥವಾ ವಿಚಾರಣೆ ಎದುರುಸುತ್ತೀರಾ?

**ದಿನಾಂಕಃ 27.02.2020.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಶ್ರೀನಿವಾಸಪುರ.**

**ಆರೋಪಿತರ ಸಹಿಃ**

1.

2.

3.

4.